■ ಹನಿ

## ಸುಂದರಿಯ ಸಂಕಷ್ಟ

ವಿವಾಹಬಾಹಿರ ಪ್ರೀತಿ ಮಾಡುವ ಗಂಡಿನ ಬಗ್ಗೆ ಸಮಾಜ ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ ಹೆಣ್ಣಿನ ಬಗ್ಗೆ ಮಾತ್ರ ಸಮಾಜಕ್ಕೆ ತೀರದ ಕುತೂಹಲ. ಅದರಲ್ಲೂ ಆಕೆ ಸೆಲೆಬ್ರಿಟಿಯಾಗಿದ್ದರೆ ಸುದ್ದಿ ಡಾಣಾಡಂಗುರ! ಪಾಕಿಸ್ತಾನದ ವಿದೇಶಾಂಗ ಸಚಿವೆ ಹಿನಾ ರಬ್ಬಾನಿ ಇದಕ್ಕೊಂದು ತಕ್ಷಣದ ಉದಾಹರಣೆ. ಒಂದು ವಾರದಿಂದ ಪತ್ರಿಕೆ, ಇಂಟರ್‌ನೆಟ್, ಟೀವಿಗಳಲ್ಲಿ ಹಿನಾರದ್ದೇ ಸುದ್ದಿ.



'ಹಿನಾ ಮತ್ತು ಪಾಕಿಸ್ತಾನದ ಅಧ್ಯಕ್ಷ ಜರ್ದಾರಿಯವರ ಮಗ ಬಿಲಾವಲ್ ಭುಟ್ಟೊ ಪರಸ್ಪರ ಪ್ರೀತಿಸುತ್ತಿದ್ದಾರೆ. ಶೀಘ್ರವೇ ರಾಜಕೀಯಕ್ಕೆ ಸಲಾಂ ಹೇಳಿ ಸ್ವಿಝರ್ಲ್ಯಾಂಡ್‌ಗೆ ಹೋಗಿ ನೆಲೆಸಲಿದ್ದಾರೆ. ಹಿನಾ ಅವರು ತಮ್ಮ ಪತಿ, ಉದ್ಯಮಿ ಫಿರೋಜ್ ಗುಲ್ಜಾರ್ ಜತೆಗೆ ಸುಖವಾಗಿಲ್ಲ. ಈಗಾಗಲೆ ಡೈವೋರ್ಸ್‌ಗೂ ಅರ್ಜಿ ಹಾಕಿದ್ದಾರೆ. ಗಂಡನ ಜತೆಗಿನ ಭಿನ್ನಮತದಿಂದ ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೂ ಪ್ರಯತ್ನಿಸಿದ್ದರು. ಈ ಸಂದರ್ಭದಲ್ಲಿ ಬಿಲಾವಲ್ ಭುಟ್ಟೊ ಸಾಂತ್ವನ ಹೇಳಿದ್ದರು. ಆ ಬಳಿಕ ಇಬ್ಬರ ನಡುವೆ ಪ್ರೇಮ ಕುದುರಿದೆ' ಎನ್ನುವುದು ಬಾಂಗ್ಲಾದ ಪತ್ರಿಕೆಯೊಂದರಲ್ಲಿ ಬಂದ ಸುದ್ದಿ.

ಕಟ್ಟಾ ಸಂಪ್ರದಾಯವಾದಿಗಳ ಸಂಖ್ಯೆ ಹೆಚ್ಚಿರುವ ಪಾಕಿಸ್ತಾನದಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಿರುವ ಈ ಸುದ್ದಿಗೆ ಮೊದಲ ಮೂರು ದಿನ ಹಿನಾ ಆಗಲೀ, ಬಿಲಾವಲ್ ಆಗಲೀ ಪ್ರತಿಕ್ರಿಯೆ ನೀಡಲಿಲ್ಲ ಎನ್ನುವುದು ಕುತೂಹಲಕರ. ತಡವಾಗಿ ಬಂದ ಸ್ಪಷ್ಟನೆಯಂತೆ, ಇದು ರಾಜಕೀಯ ಪಿತೂರಿಯ ಸುದ್ದಿ! ಅಮ್ಮ ಬೆನಜೀರ್ ಭುಟ್ಟೊ ಬಳಿಕ ಪಾಕಿಸ್ತಾನದ ಪೀಪಲ್ಸ್ ಪಾರ್ಟಿಯ ಸಹ ಅಧ್ಯಕ್ಷನಾಗಿರುವ ಬಿಲಾವಲ್ ರಾಜಕೀಯ ಜೀವನ ಮುಗಿಸಲು ಐಎಸ್‌ಐ ಈ ಸಂಚು ಹೂಡಿದೆಯಂತೆ! ಪಾಕಿಸ್ತಾನದಲ್ಲಿ ಸಾವಿರಾರು ಜನರು ಕಣ್ಮರೆಯಾಗಿರುವ ಕುರಿತು ವಿಶ್ವಸಂಸ್ಥೆಯ ತಂಡದ ತನಿಖಾ ಭೇಟಿಗೆ ಹಿನಾ ರಬ್ಬಾನಿ ಅನುಮತಿ ನೀಡಿರುವುದರಿಂದ ಆಕೆಯ ರಾಜಕೀಯ ಜೀವನವನ್ನು ಮುಗಿಸಲೂ ಐಎಸ್‌ಐನ ಕೆಲವು ಉನ್ನತ ಅಧಿಕಾರಿಗಳು ಯತ್ನಿಸಿದ್ದಾರಂತೆ! ಅದಕ್ಕೆಂದೇ ಈ ಸುಳ್ಳು ಸುದ್ದಿ ಹಬ್ಬಿಸಿದ್ದಾರಂತೆ!

34ರ ಹರೆಯದ, ಇಬ್ಬರು ಮಕ್ಕಳ ತಾಯಿಯಾಗಿರುವ ಹಿನಾ, ತನಗಿಂತ 11 ವರ್ಷ ಕಿರಿಯ ಬಿಲಾವಲ್ ಪ್ರೇಮದಲ್ಲಿ ಬಿದ್ದಿದ್ದರೆ ಅದರಲ್ಲಿ ಅಸಹಜವಾದದ್ದೇನೂ ಇಲ್ಲ. ಗಂಡನನ್ನು ತ್ಯಜಿಸುವ ಹಕ್ಕು ಆಕೆಗೆ ಧರ್ಮಬದ್ಧವಾಗಿಯೇ ಇದೆ. ಇಬ್ಬರೂ ಪ್ರತಿಭಾವಂತರು, ಸ್ಪುರದ್ರೂಪಿಗಳು. ಮ್ಯಾನೇಜ್‌ಮೆಂಟ್ ಪದವೀಧರೆ, ಹಿನಾ ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ್ದಾಗ ಆಕೆ ಧರಿಸುವ ಡಿಸೈನರ್ ಬಟ್ಟೆಗಳ ಬಗ್ಗೆ ಭಾರತದ ಫ್ಯಾಶನ್ ಮ್ಯಾಗಸಿನ್‌ಗಳು ಪುಟಗಟ್ಟಲೆ ಬರೆದಿದ್ದವು. ಪಾಕಿಸ್ತಾನದ ಪ್ರಧಾನಿ ಶೌಕತ್ ಅಜೀಜ್ ಜತೆಗೆ ಹಿನಾ ಮದುವೆಯಾಗಲಿದ್ದಾರೆ ಎಂಬ ಗಾಳಿ ಸುದ್ದಿ ಆಕೆ ಅವಿವಾಹಿತೆ ಆಗಿದ್ದಾಗಲೂ ಹಬ್ಬಿದ್ದುಂಟು. ಅದೆಲ್ಲವನ್ನು ಮೆಟ್ಟಿ ನಿಂತು ಆಕೆ ಚುನಾವಣೆಯಲ್ಲಿ ಜಯ ಗಳಿಸಿ, ಸಚಿವೆಯೂ ಆದರು. ಆದರೆ ಈ ಸಲದ ಬಿರುಗಾಳಿಯನ್ನು ಎದುರಿಸುವುದು ಸ್ವಲ್ಪ ಕಷ್ಟವಿದೆ. ಒಂದೆಡೆ ಸಂಪ್ರದಾಯದ ಪರಿಸರ, ಇನ್ನೊಂದೆಡೆ ಮತಾಂಧರ ಅಟ್ಟಹಾಸ, ಮತ್ತೊಂದೆಡೆ ರಾಜಕೀಯದ ಅಸ್ಥಿರತೆಯ ಮಧ್ಯೆ ಕನಲುತ್ತಿರುವ ದೇಶದಲ್ಲಿ ಹಿನಾಳಂತಹ ಮಹತ್ವಾಕಾಂಕ್ಷಿ ಸುಂದರಿ ನೆಮ್ಮದಿಯಿಂದ ಬದುಕುವುದು ಸಾಧ್ಯವೆ?

## ಜಾಹೀರಾತು ಚಾಂಪಿಯನ್

ಸಾಮಾನ್ಯವಾಗಿ ಕೀರ್ತಿ ಶಿಖರಕ್ಕೇರಿದ ಕ್ರೀಡಾಪಟುಗಳು ಜನರಿಂದ ದೂರವಾಗುವುದೇ ಹೆಚ್ಚು. ಆದರೆ ಒಲಿಂಪಿಕ್ ಕಂಚು ವಿಜೇತೆ, ಬ್ಯಾಡ್ಮಿಂಟನ್ ಅಗ್ರಗಣ್ಯ ತಾರೆ ಸೈನಾ ನೆಹ್ವಾಲ್, ತನ್ನ ಗುಣ ನಡತೆಯಿಂದ ಎಲ್ಲ ಭಾರತೀಯರಿಗೂ ಇನ್ನಷ್ಟು ಸಮೀಪವಾಗುತ್ತಿದ್ದಾರೆ. ತನ್ನಂತೆಯೇ ಕಷ್ಟಪಟ್ಟು ಕ್ರೀಡಾ ಸಾಧನೆ ನಡೆಸುತ್ತಿರುವವರಿಗೆ ಪ್ರೀತಿಯಿಂದ ಬಹುಮಾನ ನೀಡುತ್ತಿರುವ ಈಕೆಯ ನಡವಳಿಕೆ, ಇತರ ತಾರೆಯರಿಗೂ ಮಾದರಿಯಾಗಿದೆ. ಇದೀಗ ಪ್ಯಾರಾಲಿಂಪಿಕ್ಸ್‌ನ ಹೈಜಂಪ್‌ನಲ್ಲಿ ಬೆಳ್ಳಿ ಪದಕ ಗೆದ್ದ ಕನ್ನಡಿಗ ಗಿರೀಶ್‌ಗೂ 2 ಲಕ್ಷ ರೂಪಾಯಿ ಬಹುಮಾನ ನೀಡಿರುವ ಸೈನಾ ತನ್ನ ಸಜ್ಜನಿಕೆಯನ್ನು ಮೆರೆದಿದ್ದಾರೆ.



ಸ್ಟಾರ್ ಕ್ರೀಡಾಳುಗಳ ಜಾಹೀರಾತು ಮೌಲ್ಯ ಇತ್ತೀಚೆಗೆ ಸಾಕಷ್ಟು ಹೆಚ್ಚಾಗಿದೆ. ಹಿಂದೆಲ್ಲ ಇದು ಕ್ರಿಕೆಟಿಗರಿಗೆ ಮಾತ್ರ ಅನ್ವಯವಾಗುತ್ತಿತ್ತು. ಈಗ ಬ್ಯಾಡ್ಮಿಂಟನ್ ತಾರೆ ಸೈನಾ ಕ್ರಿಕೆಟಿಗರಿಗೂ ಸೆಡ್ಡು ಹೊಡೆದಿದ್ದಾರೆ. ಕಳೆದ ವಾರ ರಿತಿ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಕಂಪೆನಿಯು ಸೈನಾ ಜತೆ 40 ಕೋಟಿ ರೂಪಾಯಿಗಳ ಒಪ್ಪಂದಕ್ಕೆ ಸಹಿ ಹಾಕಿದೆ. ಇನ್ನು 3 ವರ್ಷಗಳ ಕಾಲ, ಸೈನಾರ ಬ್ರಾಂಡ್ ಸಾಹಚರ್ಯ, ಕಾರ್ಪೊರೇಟ್ ಒಪ್ಪಂದ, ಪೇಟೆಂಟ್, ಡಿಜಿಟಲ್ ರೈಟ್ಸ್ ಮತ್ತಿತರ ಎಲ್ಲ ಕಮರ್ಷಿಯಲ್ ಚಟುವಟಿಕೆಗಳನ್ನು ರಿತಿ ಸ್ಪೋರ್ಟ್ಸ್ ನಿರ್ವಹಣೆ ಮಾಡಲಿದೆ. ಒಲಿಂಪಿಕ್ಸ್‌ನಲ್ಲಿ ಪುರುಷರ ವಿಭಾಗದಲ್ಲಿ ಚಿನ್ನ ಗೆದ್ದ ಚೀನಾದ ಅಗ್ರಮಾನ್ಯ ಬ್ಯಾಡ್ಮಿಂಟನ್ ಆಟಗಾರ ಲಿನ್ ಡಾನ್, ಜಾಹೀರಾತುಗಳ ಮೂಲಕ ವರ್ಷಕ್ಕೆ 12.8 ಕೋಟಿ ರೂಪಾಯಿ ಆದಾಯ ಪಡೆಯುತ್ತಿರುವುದು ಬಿಟ್ಟರೆ, ಸೈನಾಳದ್ದೇ ಅತಿದೊಡ್ಡ ಜಾಹೀರಾತು ಮೊತ್ತ.

ಈ ಹಿಂದೆ ಸಚಿನ್ ತೆಂಡೂಲ್ಕರ್ ಜತೆಗೆ 70 ಕೋಟಿ ರೂಪಾಯಿಗೆ ಹಾಗೂ ಮಹೇಂದ್ರ ಸಿಂಗ್ ಧೋನಿ ಜತೆಗೆ 100 ಕೋಟಿ ರೂಪಾಯಿಗೆ ಇದೇ ರಿತಿ ಸ್ಪೋರ್ಟ್ಸ್ ಒಪ್ಪಂದ ಮಾಡಿಕೊಂಡಿತ್ತು. ಮಹಿಳೆಯಲ್ಲಿ ಸೈನಾಳದ್ದೇ ಅತ್ಯಧಿಕ ಮೊತ್ತ. ಕ್ಯಾನ್ಸರ್ ಸೊಸೈಟಿ, ಹರ್ಬಲ್, ಏರ್‌ಟೆಲ್, ಅದಾನಿ ವಿಲ್ಮರ್, ಯೋನೆಕ್ಸ್, ಜೇಪೀ ಸಿಮೆಂಟ್, ಸ್ಟಾರ್ ಪ್ಲಸ್, ಟಾಪ್ ರಾಮನ್ ನೂಡಲ್ಸ್– ಹೀಗೆ ಹಲವಾರು ಕಂಪೆನಿಗಳ ಜಾಹೀರಾತಿನಲ್ಲಿ ಮಿಂಚುತ್ತಿರುವ ಸೈನಾ ಇನ್ನಷ್ಟು ಎತ್ತರಕ್ಕೇರಲಿ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65